**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ದಿನೇಶ್ ಗೂಳಿಗೌಡ ರವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

7

**ಸೂಚನೆ:**

**"ರಾಜ್ಯ ಸರ್ಕಾರವು ಜಿಲ್ಲೆಯ ರೈತರ ಅಲ್ಪಾವಧಿ ಬೆಳೆ ಸಾಲವನ್ನು ಒಂದು ಕುಂಟುಂಬಕ್ಕೆ 1.00 ಲಕ್ಷದವರೆಗಿನ ಸಾಲ ಮನ್ನಾ ಮಾಡಿದ್ದು, ಸದರಿ ಯೋಜನೆಯಡಿ ಮಂಡ್ಯ ಜಿಲ್ಲೆಯ ಒಟ್ಟು 1,08,861 ರೈತ ಫಲಾನುಭವಿಗಳಿಂದ ರೂ.507.74 ಕೋಟಿಗಳ ಸಾಲ ಮನ್ನಾ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಪೈಕಿ ಜಿಲ್ಲೆಯ ಒಟ್ಟು 1,05,840 ರೈತ ಫಲಾನುಭವಿಗಳಿಗೆ ರೂ.492.37 ಕೋಟಿ ಸಾಲ ಮನ್ನಾ ಸೌಲಭ್ಯ ದೊರೆತಿರುತ್ತದೆ. ಉಳಿಕೆ 3021 ರೈತರ ಪೈಕಿ ದಿನಾಂಕ:15.09.2021, 28 ಮತ್ತು 29 ಪಂಗಡ ಒಟ್ಟು 1243 ರೈತ ಸದಸ್ಯರುಗಳಿಗೆ ರೂ.6.92 ಕೋಟಿಗಳು ಹಾಗೂ ದಿನಾಂಕ:9-11-2021 ರಂದು 30ನೇ ಪಂಗಡ ಒಟ್ಟು 902 ರೈತರಿಗೆ ರೂ.3.95 ಕೋಟಿಗಳು ಹಸಿರು ಪಟ್ಟಿಯಲ್ಲಿದ್ದು, ತಹಲ್‌ವರೆವಿಗೂ ಸರ್ಕಾರದಿಂದ ಸಾಲಮನ್ನಾ ಹಣ ಬಿಡುಗಡೆಯಾಗಿರುವುದಿಲ್ಲ. ಅದೇ ರೀತಿ ಉಳಿತಾಯ ಖಾತೆ ತಪ್ಪಾಗಿರುವ ಪ್ರಕರಣಗಳು 105 ರೈತ ಸದಸ್ಯರುಗಳಿಗೆ ರೂ.0.57 ಕೋಟಿಗಳು ಸರ್ಕಾರದಿಂದ ಬಿಡುಗಡೆಯಾಗಲು ಬಾಕಿ ಇರುತ್ತದೆ. ಉಳಿಕೆ 771 ರೈತರಿಗೆ ರೂ.3.93 ಕೋಟಿಗಳು ಹಸಿರು ಪಟ್ಟಿಗೆ ಬರಲು ಬಾಕಿ ಇರುವುದರಿಂದ ಇದನ್ನು ಶೀಘ್ರವಾಗಿ ಹಣ ಬಿಡುಗಡೆ ಮಾಡಬೇಕಾಗಿರುವುದರಿಂದ ಈ ವಿಷಯವನ್ನು ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಲು ಬಯಸುತ್ತೇನೆ."**

**ಉತ್ತರ:**

ಸಹಕಾರ ಸಂಘಗಳ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯ 230 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಇದುವರೆಗೆ ಒಟ್ಟು 1,11,399 ರೈತರ ಸಾಲದ ಮಾಹಿತಿ ಮತ್ತು ವೈಯಕ್ತಿಕ ಮಾಹಿತಿಯನ್ನು ಸಾಲ ಮನ್ನಾ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಈ ಪೈಕಿ 2,633 ರೈತರನ್ನು ಅನರ್ಹ ರೆಂದು ತಂತ್ರಾಂಶದಿಂದ ರಿಜೆಕ್ಟ್ ಮಾಡಲಾಗಿದ್ದು, 1,08,766 ರೈತರ ಮಾಹಿತಿಯು ಅಂತಿಮವಾಗಿ ಇರುತ್ತದೆ.

ಇದುವರೆಗೆ 1,08,096 ರೈತರಿಗೆ ರೂ.503.81 ಕೋಟಿಗಳ ಸಾಲ ಮನ್ನಾ ಮಾಡಲು ಅರ್ಹತೆ ಗುರುತಿಸಿದ್ದು, ಈ ಪೈಕಿ 1,05,945 ರೈತರ ಉಳಿತಾಯ ಖಾತೆಗಳಿಗೆ ರೂ.492.95 ಕೋಟಿಗಳನ್ನು ಅಪೆಕ್ಸ್ ಬ್ಯಾಂಕಿನ ಮೂಲಕ ನೆಫ್ಟ್ ಮಾಡಲಾಗಿದ್ದು, 2151 ರೈತರಿಗೆ ರೂ.10.87 ಕೋಟಿಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ.

ಬಿಡುಗಡೆಗೆ ಬಾಕಿ ಇರುವ ರೂ.10.87 ಕೋಟಿಗಳ ಮೊತ್ತಕ್ಕೆ ಸಂಬಂಧಿಸಿದಂತೆ ಸಾಲ ಮನ್ನಾ ವಿಶೇಷ ಕೋಶದಿಂದ 28, 29 ಮತ್ತು 30 ನೇ ಕಂತಿನ ಹಸಿರು ಪಟ್ಟಿಯಲ್ಲಿ ಸಾಲ ಮನ್ನಾ ಮಾಡಲು ಅರ್ಹತೆ ಗುರುತಿಸಿದ್ದು, ಈ ಮೊತ್ತವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಅಪೆಕ್ಸ್ ಬ್ಯಾಂಕಿನ ಮೂಲಕ ನೆಫ್ಟ್ ಮಾಡಿದ ಅನುದಾನದ ಪೈಕಿ 105 ರೈತರಿಗೆ ಸಂಬಂಧಿಸಿದ ರೂ.0.57 ಕೋಟಿಗಳ ಸಾಲ ಮನ್ನಾ ಮೊತ್ತವು ಸಹಕಾರ ಸಂಘಗಳು ರೈತರ ಉಳಿತಾಯ ಖಾತೆಯನ್ನು ತಪ್ಪಾಗಿ ಅಳವಡಿಸಿದ್ದರಿಂದ ವಾಪಸ್ ಆಗಿದ್ದು, ಇಂತಹ ಖಾತೆಗಳನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ಡಿಸಿಸಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕಿನಿಂದ ರೈತರ ಪಟ್ಟಿ ನೀಡಲು ಬಾಕಿ ಇದ್ದು, ಈ ಪಟ್ಟಿಯನ್ನು ಶೀಘ್ರದಲ್ಲಿ ಪಡೆದು ಸಾಲ ಮನ್ನಾ ವಿಶೇಷ ಕೋಶಕ್ಕೆ ತಿಳಿಸಿ ಸರಿಪಡಿಸಲು ಕ್ರಮವಹಿಸಲಾಗುವುದು.

ಸಹಕಾರ ಸಂಘಗಳು ತಿರಸ್ಕರಿಸಿದ ನಂತರ ಅರ್ಹತೆ ಗುರುತಿಸಲು ಬಾಕಿ ಇರುವ 670 ರೈತರ ಸಾಲದ ಮಾಹಿತಿ ಮತ್ತು ವೈಯಕ್ತಿಕ ದಾಖಲೆಗಳ ಮಾಹಿತಿಯನ್ನು ಸಾಲ ಮನ್ನಾ ತಂತ್ರಾಂಶದಲ್ಲಿ ಸಹಕಾರ ಸಂಘಗಳು ತಪ್ಪಾಗಿ ಅಳವಡಿಸಿರುವುದರಿಂದ ಮತ್ತು ರೈತರು ನೀಡಿದ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಪಹಣಿ ದಾಖಲೆಗಳು ಸಂಬಂಧಿಸಿದ ಇಲಾಖೆಯ ದತ್ತಾಂಶಕ್ಕೆ ತಾಳೆಯಾಗದೇ ಇರುವುದರಿಂದ ಇದುವರೆಗೆ ಅರ್ಹತೆ ಗುರುತಿಸಲು ಬಾಕಿ ಇರುತ್ತದೆ.

ಸಾಲ ಮನ್ನಾ ಅರ್ಹತೆ ಗುರುತಿಸಲು ಬಾಕಿ ಇರುವ ಕಾರಣಗಳು ಈ ಕೆಳಗಿನಂತಿರುತ್ತವೆ,

| ಕ್ರ ಸಂ | ಸಾಲ ಮನ್ನಾ ಅರ್ಹತೆ ಗುರುತಿಸದೇ ಇರಲು ಕಾರಣಗಳು | | ಪ್ರಕರಣಗಳ ಸಂಖ್ಯೆ |
|---|---|---|---|
| 1 | ರೈತರ ದಾಖಲೆಗಳು ಸರಿ ಇದ್ದು ಸಾಲ ಮನ್ನಾ ವಿಶೇಷ ಕೋಶದಿಂದ ಹಸಿರು ಪಟ್ಟಿ ನೀಡಲು ಬಾಕಿ ಇರುವ ಪ್ರಕರಣಗಳು | | 61 |
| 2 | ಲಾಗಿನ್‌ನಲ್ಲಿ ರೈತರ ಸಾಲದ ಮಾಹಿತಿ ತಪ್ಪಾಗಿರುವುದು | Fraud/type of loan ತಪ್ಪಾಗಿ ಅಳವಡಿಸಿರುವುದು | 92 |
| 3 | | Outstanding '0' ಎಂದು ನಮೂದಿಸಿರುವುದು. | 14 |
| 4 | | ಸುಸ್ತಿ ಸಾಲಗಳಿಗೆ ಬಡ್ಡಿ ಪಾವತಿಯನ್ನು ಸರ್ಕಾರದ ಆದೇಶದ ನಿಗದಿತ ದಿನಾಂಕಕ್ಕೆ ತಾಳೆಯಾಗದೇ ಇರುವುದು | 53 |
| 5 | ಸ್ವಯಂ ದೃಢೀಕರಣ ಲಾಗಿನ್‌ನಲ್ಲಿನ ರೈತರ ಮಾಹಿತಿಗಳು ತಪ್ಪಾಗಿರುವುದು | ಎರಡು ಸಂಘದಲ್ಲಿ ಅಥವಾ ಖಾತೆಗಳಲ್ಲಿ ಆಧಾರ್ ಕಾರ್ಡ್ ಸಂಖ್ಯೆ ಎರಡು ಬಾರಿ ಇದ್ದು, ಒಂದು ಖಾತೆಗೆ ಸಾಲ ಮನ್ನಾ ನೀಡಲಾಗಿದ್ದು, ಉಳಿದ ಖಾತೆಯನ್ನು ಸಹಕಾರ ಸಂಘಗಳು ರಿಜೆಕ್ಟ್ ಮಾಡದೇ ಇರುವ ಪ್ರಕರಣಗಳು | 162 |
| 6 | | ಒಂದು ಕುಟುಂಬಕ್ಕೆ ರೂ.1.00 ಲಕ್ಷಗಳ ಸಾಲ ಮನ್ನಾ ಮೀರಿದ್ದು, ಅಂತಹ ಖಾತೆಗಳನ್ನು ಸಹಕಾರ ಸಂಘಗಳ ರಿಜೆಕ್ಟ್ ಮಾಡದೇ ಇರುವ ಪ್ರಕರಣಗಳು | 87 |
| 7 | | ರೈತರ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಆರ್‌ಟಿಸಿ ಸಂಬಂಧಿಸಿದ ಇಲಾಖೆಯ ದತ್ತಾಂಶದಲ್ಲಿ ಇಲ್ಲದೇ ಇರುವುದು ಅಂದರೆ ಅತೆಂಟಿಕೇಟ್ ಆಗದೇ ಇರುವುದು. | 11 |
| 8 | | ರೈತರ ಸ್ವಯಂ ದೃಢೀಕರಣವನ್ನು ಸಹಕಾರ ಸಂಘಗಳು ಅಪ್ ಲೋಡ್ ಮಾಡದೇ ಇರುವುದು | 2 |
| 9 | | ರೈತರು ನೀಡಿದ ಪಡಿತರ ಚೀಟಿಗಳು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಸರಿ ಇರುವ ಬಗ್ಗೆ ದೃಢೀಕರಣ ನೀಡದೇ ಇರುವುದು | 142 |
| 10 | | ಇತರೇ ಕಾರಣಗಳು (ಮೇಲಿನ ಒಂದಕ್ಕಿಂತ ಹೆಚ್ಚಿನ ಕಾರಣಗಳಿಗೆ | 25 |
| 11 | ತಾಲ್ಲೂಕು ಸಮಿತಿ ರಿಜೆಕ್ಟ್ ಮಾಡಿರುವ ಪ್ರಕರಣಗಳು | | 21 |
| | | **ಒಟ್ಟು** | **670** |

ಅರ್ಹತೆ ಗುರುತಿಸಲು ಬಾಕಿ ಇರುವ 670 ರೈತರ ಅರ್ಹತೆ ಗುರುತಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ತಾಲ್ಲೂಕು ಸಮಿತಿಯಲ್ಲಿ ಪರಿಶೀಲಿಸಿರುವ ಅರ್ಜಿಗಳನ್ನು ಹೊರತುಪಡಿಸಿ ಹಸಿರುಪಟ್ಟಿಗೆ ಬರಲು ಬಾಕಿ ಇರುವ ಉಳಿದ ಎಲ್ಲಾ ಸ್ವಯಂ ದೃಢೀಕರಣದ ಅರ್ಜಿಗಳನ್ನು ತಿದ್ದುಪಡಿ ಮಾಡಲು ಈಗಾಗಲೇ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿ ಇದರ ಆಧಾರದ ಮೇಲೆ 30 ನೇ ಹಸಿರು ಪಟ್ಟಿ ತಯಾರಿಸಲಾಗಿದೆ.
2. ಇದಾದ ನಂತರವೂ ಅರ್ಹತೆ ಗುರುತಿಸಲು ಬಾಕಿ ಇರುವ ರೈತರಿಗೆ ಸಂಬಂಧಿಸಿದಂತೆ ಯಾವ ಕಾರಣಕ್ಕಾಗಿ ರೈತರ ಅರ್ಹತೆ ಗುರತಿಸಲಾಗಿಲ್ಲ ಎಂಬ ವಿವರವಾದ ರೈತರ ಪಟ್ಟಿಯನ್ನು ಸಂಬಂಧಿಸಿದ ಸಹಕಾರ ಸಂಘಗಳಿಗೆ ನೀಡಿ ಇವುಗಳನ್ನು ಸರಿಪಡಿಸಲು ಪ್ರಾಂತೀಯ ಹಂತದ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಸಂಬಂಧಿಸಿದ ಡಿಸಿಸಿ ಬ್ಯಾಂಕ್ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಲಾಗಿದೆ.
3. ಸ್ವಯಂ ದೃಢೀಕರಣದಲ್ಲಿ ರೈತರು ಈ ಮೊದಲು ಸಲ್ಲಿಸಿದ ಪಡಿತರ ಚೀಟಿಯಲ್ಲಿನ ಹೆಸರು ಸಾಲಗಾರರ ಹೆಸರಿಗೆ ತಾಳೆಯಾಗದೇ ತಾಲ್ಲೂಕು ಸಮಿತಿಗೆ ಹೋಗಿದ್ದು, ಸದ್ಯ ರೈತರು ಪಡಿತರ ಚೀಟಿಯನ್ನು ಬದಲಿಸಿದ್ದು, ಇದರಲ್ಲಿನ ಹೆಸರು ಸಾಲಗಾರರ ಹೆಸರಿಗೆ ತಾಳೆಯಾಗಿದ್ದರೂ ಸಹ ತಾಲ್ಲೂಕ ಸಮಿತಿಯಲ್ಲಿ ಬಾಕಿ ಇರುವುದಾಗಿ ಸಾಲ ಮನ್ನಾ ವಿಶೇಷ ಕೋಶದಿಂದ ತಿಳಿಸಿದ್ದು, ಆದರೆ ಇದು ವಾಸ್ತವವಾಗಿ ತಾಲ್ಲುಕ ಸಮಿತಿಗೆ ಹೋಗದೆ ಇದ್ದು ಇದನ್ನು ಸರಿಪಡಿಸಲು ಸಾಲ ಮನ್ನಾ ವಿಶೇಷ ಕೋಶಕ್ಕೆ ಕೋರಲಾಗಿದೆ.
4. ಕಲಂ 52 ರಲ್ಲಿನ ಮಾಹಿತಿಯನ್ನು ಸಹಕಾರ ಸಂಘಗಳು ತಪ್ಪಾಗಿ ಅಳವಡಿಸಿದ್ದು, ಇವುಗಳನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ಸಾಲ ಮನ್ನಾ ವಿಶೇಷ ಕೋಶಕ್ಕೆ ಕೋರಲಾಗಿದೆ.
5. ಸ್ವಯಂ ದೃಢೀಕರಣದಲ್ಲಿನ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ಸಂಖ್ಯೆಗಳನ್ನು ಸಹಕಾರ ಸಂಘಗಳು ತಪ್ಪಾಗಿ ಅಳವಡಿಸಿರುವುದರಿಂದ ಒಂದು ಕುಟುಂಬ/ಸದಸ್ಯರಿಗೆ ರೂ.1.00 ಲಕ್ಷಗಳ ಸಾಲ ಮನ್ನಾ ಮಿತಿ ಮೀರಿದ್ದು, ಇಂತಹುಗಳನ್ನು ಸಹ ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ಸಾಲ ಮನ್ನಾ ವಿಶೇಷ ಕೋಶಕ್ಕೆ ಕೋರಲಾಗಿದೆ.

ಕಲಂ 52 ರಲ್ಲಿ ತಪ್ಪಾಗಿ ಅಳವಡಿಸಿರುವ ಮಾಹಿತಿಯನ್ನು ಸಹಕಾರ ಸಂಘಗಳು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿದರೆ ಬಾಕಿ ಇರುವ ಎಲ್ಲಾ ರೈತರ ಮಾಹಿತಿಯನ್ನು ಸಹ ಸಹಕಾರ ಸಂಘಗಳು ತಿದ್ದುಪಡಿ ಮಾಡಿ ದುರುಪಯೋಗ ಪಡಿಸಿಕೊಳ್ಳಬಹುದಾದ ಸಾಧ್ಯತೆ ಇರುತ್ತದೆ. ಆದುದರಿಂದ ಈ ಬಗ್ಗೆ ಆಯುಕ್ತರು ಭೂ–ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ–ದಾಖಲೆಗಳ ಇಲಾಖೆಯವರು ಪರಿಶೀಲಿಸಿ ಕ್ರಮವಹಿಸಬೇಕಾಗಿರುತ್ತದೆ.

**ಸಂಖ್ಯೆ : ಸಿಒ 50 ಸಿಎಲ್‌ಎಸ್ 2022**

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು